# ಕೆರೆಗೆ ಹಾರ

ಸಾಹಿತ್ಯ, ಸಂಸ್ಕೃತಿ, ಸಮಾಜದ ಅಧ್ಯಯನಕ್ಕೆ ತೊಡಗುವವರು ಹಿಂದಣವರು ಉಳಿಸಿಹೋದ ಹೆಜ್ಜೆಗುರುತುಗಳ ಜಾಡ ಹಿಡಿಯಲೇಬೇಕು. ಹಿಂದಣ ಹೆಜ್ಜೆಯನು ಅರಿತಲ್ಲದೇ ಮುಂದಿನ ಹೆಜ್ಜೆಯನು ಅರಿಯಲಾಗದು. ನಿರ್ದಿಷ್ಟವಾದ ಸಂಸ್ಕೃತಿಯ ಅಧ್ಯಯನಕ್ಕೆ ತೊಡಗುವವರಂತೂ ಆ ಪ್ರದೇಶದ ನೆಲ–ಜಲದ ಅಧ್ಯಯನಕ್ಕೆ ತೊಡಗದೆ ಮುಂದುವರೆಯುವಂತಿಲ್ಲ. ಸಿಂಧೂ ನಾಗರಿಕತೆಯನ್ನು ಒಳಗೊಂಡಂತೆ ಎಲ್ಲ ಸಂಸ್ಕೃತಿಗಳೂ ಸಹ ನದಿ, ಕೆರೆ, ಹಳ್ಳಕೊಳ್ಳಗಳ ಪಕ್ಕದಲ್ಲೇ ಅವುಗಳ ಹರಿಯುವಿಕೆಯೊಂದಿಗೆ ಒಂದಲ್ಲಾ ಒಂದು ರೀತಿಯಲ್ಲಿ ಸಂಬಂಧವಿಟ್ಟುಕೊಂಡಿರುತ್ತವೆ. ಹೀಗಾಗಿ ಜಲವೇ ಮೂಲವಾಗಿ ಸಂಸ್ಕೃತಿಗಳ ಅಧ್ಯಯನ ನಡೆಯುತ್ತಿರುತ್ತದೆ.

ಕೆರೆ, ಕಟ್ಟೆ, ಕೋಟೆಗಳನ್ನು ಊರಗೌಡ ಕಟ್ಟಿಸುವಾಗ ಅದರ ಅಡಿಪಾಯ ಭದ್ರವಾಗಿ ನಿಲ್ಲದಿದ್ದರೆ ನರಬಲಿ ಕೊಡುವ ಪದ್ಧತಿಯಿತ್ತು. ಇಲ್ಲಿ ಗೌಡರೆಂದರೆ ಯಾರು ಭೂಮಿಕಾಣಿಗಳನ್ನು ಒಳಗೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ ಗಟ್ಟಿಕುಳಗಳಾಗಿದ್ದರೋ ಅವರೆಲ್ಲಾ ವಂಶಪಾರಂಪರ್ಯವಾಗಿ ಊರಗೌಡರಾಗಿರುತ್ತಿದ್ದರು. ಕೆರೆಕಟ್ಟೆಗಳ ನಿರ್ಮಾಣದ ಸಂದರ್ಭದಲ್ಲಿ ಕೊಡುತ್ತಿದ್ದ 'ಕೆರೆಗೆ ಹಾರ' ಕುರಿತಾಗಿ ಹಲವು ಕತೆಗಳು ನಮ್ಮ ನಡುವೆ ಚಾಲ್ತಿಯಲ್ಲಿವೆ. ಕೆರೆಕಟ್ಟೆಗಳ ಬದಿಯಲ್ಲಿರುವ ಶಾಸನ ರೂಪದ ಕಲ್ಲುಬರಹಗಳು ಇವುಗಳನ್ನು ಅನುಮೋದಿಸುತ್ತವೆ.

ಬೆಟಗೇರಿ ಕೃಷ್ಣಶರ್ಮರು 1940ರಲ್ಲಿ ಸಂಗ್ರಹಿಸಿದ 'ಕೆರೆಗೆ ಹಾರ' ಈ ಕುರಿತ ಕಥನಕಾವ್ಯ ಪರಂಪರೆಯಲ್ಲಿನ ಮೊದಲ ಕೃತಿ. ಕಲ್ಲನಕೇರಿ ಭಾಗೀರಥಿಯ ಕಥೆ, ಕುಣಗಲು ಕೆರೆ, ಒಡ್ಡರ ಬೋಯಿ ಕತೆ, ಕರ್ನಾಟಕದ ಗಡಿರೇಖೆಯಲ್ಲಿರುವ ಬಂದಮ್ಮನ ಕಥೆ, ಅಣಜಿ ಹೊನ್ನಮ್ಮನ ಕಥೆ ಇಂಥ ಹಲವು ಕಥೆಗಳು 'ಕೆರೆಗೆ ಹಾರ' ಸಂಪ್ರದಾಯ ಕುರಿತಾಗಿ ಲಭ್ಯವಾಗುತ್ತಲೇ ಇರುವ ಕೃತಿಗಳಾಗಿವೆ. ಇದರಲ್ಲಿ 'ಬಂದಮ್ಮನ ಕಥೆ' ಮಾತ್ರ ಗೌಡ ತನ್ನ ಮನೆಯ ಹೆಣ್ಣುಮಕ್ಕಳನ್ನು ಬಲಿಕೊಡದೆ ತನ್ನ ಆಳುಮಗನ ಸೊಸೆಯನ್ನು ಬಲಿಕೊಟ್ಟ ಕಥೆಯಾಗಿದೆ. ಉಳಿದಂತೆ ಎಲ್ಲಾ ಕಥೆಗಳಲ್ಲಿ ಗೌಡ ತನ್ನ ಸೊಸೆಯನ್ನು ಬಲಿಕೊಟ್ಟ ಕಥೆ ಸಾಮಾನ್ಯವಾಗಿ ಬರುತ್ತದೆ. ಈ ಎಲ್ಲಾ ಕಥೆಗಳು ಹೇಳುವುದು ನೆಲದಲ್ಲಿನ ಜಲದ ಕಣ್ಣು ತೆರೆಯಬೇಕೆಂದರೆ, ಅದರಿಂದ ಜನಾಂಗದವರೆಲ್ಲ ಬೆಳೆಯಬೇಕೆಂದರೆ ಕೆರೆಗೆ ಹಾರವಾಗಬೇಕಾದದ್ದು ಹೆಣ್ಣೇ ಎಂದು. ಹೆಣ್ಣಿಗೂ ಮಣ್ಣಿಗೂ ಜಲಕ್ಕೂ ಎಲ್ಲೋ ಭೂಗರ್ಭದ ತಳಾಂತರದ ಸಂಬಂಧವಿರಬೇಕು.

ಈ ಹಿನ್ನೆಲೆಯಲ್ಲಿ ಕ.ರಾ. ಕೃಷ್ಣಸ್ವಾಮಿ ತಮ್ಮ ಸ್ನೇಹಿತರಾದ ಪಿ.ಆರ್. ತಿಪ್ಪೇಸ್ವಾಮಿಯವರೊಂದಿಗೆ ನಡೆಸಿದ ಕ್ಷೇತ್ರಕಾರ್ಯ ಮುಖ್ಯವಾದುದು. ಚಿತ್ರದುರ್ಗ ಜಿಲ್ಲೆ, ಜಗಳೂರಿನ ಅಣಜಿ ಹೊನ್ನಮ್ಮನ ಕತೆ ಕೆರೆಗೆ ಹಾರದ ಕತೆಗಳಲ್ಲಿ ಭಿನ್ನವಾದುದು. ಉಳಿದ ಕತೆಗಳಲ್ಲಿ ಬರುವಂತೆ ಇಲ್ಲಿರುವ ಕೆಂಚನಗೌಡನಿಗೆ ಒಬ್ಬನೇ ಮಗ ಮಲ್ಲನಗೌಡ, ಒಬ್ಬಳೇ ಕೂಸಿರುವ ಸೊಸೆ ಹೊನ್ನಮ್ಮ. ಅಣಜಿಯ ಸಮೀಪವಿರುವ ಉಚ್ಚಂಗಿಯ ಎಲ್ಲಮ್ಮ ತನ್ನ ಭಕ್ತರು ಕುಡಿಯಲು ನೀರಿಲ್ಲದೆ ಪರಿತಪಿಸುತ್ತಿರುವುದನ್ನು ಕಂಡು ಪರಿತಪಿಸುತ್ತಾಳೆ. ತನ್ನ ಒಕ್ಕಲಾದ ಅಣಜಿಯ ಕೆಂಚನಗೌಡನ ಮನೆಗೆ ಅತಿಥಿಯಾಗಿ ಮುದುಕಿಯ ರೂಪದಲ್ಲಿ ಪ್ರವೇಶ ಮಾಡಿದವಳು ರಾತ್ರಿ ಕನಸಿನಲಿ ದೇವತೆಯಾಗಿ 'ಬಾರಪ್ಪ ಕೆಂಚನಗೌಡ, ಅಣಜಿ ಕೆರೆ ಕಟ್ಟಿಸಬೇಕು' ಎಂಬ ನಿರೂಪ ಕೊಡುತ್ತಾಳೆ. ಮರುದಿನವೇ ಕೆರೆಕಟ್ಟಲು ವಡ್ಡರಾದ ವೆಂಕಣ್ಣ, ಬಂಕಣ್ಣರನ್ನು ಕರೆಸುತ್ತಾನೆ.

ಕೆಲಸವೇನೋ ಆರಂಭವಾಗುತ್ತದೆ. ದುರಂತವೆಂದರೆ ಸಾವಿರಾರು ಹಾರೆ, ಗುದ್ದಲಿಗಳು ಮುರಿದುಬೀಳುತ್ತವೆ. ಕಟ್ಟೆಗೆ ಏರಿಸಿದ ಕಲ್ಲುಗಳು ಉರುಳಿಬೀಳುತ್ತವೆ. ಶಾಸ್ತ್ರದವನನ್ನು ಕರೆಸಿ ಕೇಳಿದಾಗ ಗೌಡನ ಮುಖ ನೋಡಿ ಅವನು, 'ಅಂಜಿ ಹೇಳಲೇನೋ, ಕೆಂಚನಗೌಡ ಅಂಜದೆ ಹೇಳಲೇನೋ' ಎನ್ನುತ್ತಾನೆ. ಅವನು ಹೇಳಿದ ನರಬಲಿಯಲ್ಲಿ ಗೌಡನನ್ನು ಬಿಟ್ಟು ಅವನ ಹೆಂಡತಿ, ಮಗ, ಸೊಸೆ ಯಾರಾದರೂ ಬಲಿಯಾಗಬಹುದಿತ್ತು. ಹೆಂಡತಿ, ಮಗಳು, ಮಗನನ್ನು ಉಳಿಸಿಕೊಂಡ ಗೌಡ 'ಒಬ್ಬ ಸೊಸೆ ಹೋದರೆ ಇನ್ನೊಬ್ಬಳನ್ನು ತರಬಹುದು' ಎಂದು ಸೊಸೆಯನ್ನೇ ಬಲಿ ಕೊಡಲು ತೀರ್ಮಾನಿಸುತ್ತಾನೆ.

ಅದೇ ದಿನ ಮಗ ಮಲೆನಾಡಿಗೆ ಹೋಗುತ್ತಾನೆ. ಗೌಡ ಹೊನ್ನಮ್ಮನಿಂದಲೇ ಕೆರೆಯ ಪೂಜಾ ಸಿದ್ಧತೆ ಮಾಡಿಸುತ್ತಾನೆ. ತನ್ನ ಗಂಡನಿಗೆ ಮತ್ತೊಂದು ಲಗ್ನವಾದಂತೆ ಅವಳಿಗೆ ಕನಸು ಬೀಳುತ್ತದೆ. ಹೊನ್ನಮ್ಮ ಕೆರೆಯಿಂದ ಕೆಮ್ಮಣ್ಣು ತರಲೆಂದು ಹೋದಾಗ ಕುರುಬನೊಬ್ಬನನ್ನು ಊರಸುದ್ದಿಯ ಬಗ್ಗೆ ಕೇಳುತ್ತಾಳೆ. 'ಇನ್ನು ಗೌಡರ ಹೊನ್ನಮ್ಮ ನಿನ್ನ ಕೆರೆಗೆ ಇಡುತಾರಂತೆ' ಸುದ್ದಿ ಕೇಳಿ ಹೊನ್ನಮ್ಮನ ಹೆಜ್ಜೆ ಭಾರವಾಗುತ್ತದೆ.

ಮುಂದೆ ಹೊನ್ನಮ್ಮ ಮಾವನ ಅನುಮತಿ ಪಡೆದು ತವರಿಗೆ ಹೋಗಿಬರಲು ಯಾಚಿಸುತ್ತಾಳೆ. ಸಂಶಯಿಸಿದ ಮಾವ 'ಕಾದ ಬಂಡೆಯಮೇಲೆ ಉಗುಳಿದ ಉಗುಳು ಆರುವ ಮುನ್ನವೇ' ಬರುವುದಾಗಿ ಹೇಳಿ ನಾದಿನಿ ಹೊಳಲವ್ವನೊಂದಿಗೆ ತವರಿಗೆ ಹೋಗುತ್ತಾಳೆ. ತಾಯಿ, ತಂದೆ ಏಳು ಜನ ಅಣ್ಣತಮ್ಮಂದಿರನ್ನು ಕಂಡು 'ನಮ್ಮತ್ತಿ, ನಮ್ಮಾವ ಬೇರೆ ಮಾಡ್ಯೆದರೆ, ಚಿಕ್ಕೋಳು ಹೊನ್ನವ್ವನ್ನು ಕೊಡಿರವ್ವ' ಎಂಬ ಮಾತು ಪಡೆಯುತ್ತಾಳೆ.

ಹಿಂತಿರುಗಿ ಬಂದ ಹೊನ್ನಮ್ಮ ಮಗನಿಗೆ ಮೊಲೆಯುಣಿಸಿ 'ಬಾರಪ್ಪ ನನಮಗನೆ, ನೀನು ಕುಡಿದ ಮೊಲೆ, ನಾಳೆ ಇಲ್ಲವಲ್ಲೋ' ಎಂದು ದುಃಖಿಸುತ್ತಾಳೆ. ಮಾವ ಪೂಜೆಗೆ ಸಿದ್ಧವಾಗುವಂತೆ ಹೇಳಿ ಜನಸಮೂಹದ ಜೊತೆ ಕೆರೆಗೆ ಕೊಂಡೊಯ್ಯುತ್ತಾನೆ. ಇಲ್ಲೆಲ್ಲಾ ಅತ್ತೆ, ನಾದಿನಿಗಿಂತ ಆಜ್ಞೆ ಮಾಡುವ ಮಾವನೇ ಎದ್ದು ಕಾಣುತ್ತಾನೆ.

ಉಳಿದ 'ಕೆರೆಗೆ ಹಾರ'ದ ಕತೆಗಳಲ್ಲಿ ಬರುವಂತೆ ಮರೆತುಹೋದ ಬಟ್ಟಲನ್ನು ತರಹೋದ ಹೊನ್ನಮ್ಮನನ್ನು ಗಂಗೆ ಒಳಸೆಳೆದುಕೊಳ್ಳುತ್ತಾಳೆ. ತಾನು ನೀರಲ್ಲಿ ಮರೆಯಾಗುವ ಮುನ್ನ ತನ್ನ ಮಾವ ಕ್ಷೇಮವಾಗಿ ಮನೆ ತಲುಪುವಂತೆ ಹೇಳುವ ಅವಳ ಮಾತು ತಾನು ಬಲಿಯಾದರೂ ಉಳಿಸಿಕೊಂಡಿರುವ ಮಾನವೀಯತೆಯನ್ನು ಎತ್ತಿ ಹಿಡಿಯುತ್ತದೆ. ಮುಂದೆ ತಾನು ಬಿಟ್ಟುಬಂದ ಕೂಸನ್ನು ತನ್ನೊಂದಿಗೆ ಹೊನ್ನಮ್ಮ ಕರೆದುಕೊಳ್ಳುತ್ತಾಳೆ. ಉಳಿದ ಕಥಾ ಪರಂಪರೆಯಲ್ಲಿ ಬರುವಂತೆ ಹಾರವಾದ ಹೆಣ್ಣಿನ ಗಂಡ ತಾನೂ ಸಹ ಕೆರೆಗೆ ಹಾರಿ ಸತಿಪ್ರೇಮವನ್ನು ಸಾಬೀತು ಮಾಡುತ್ತಾನೆ.

ಮದುವೆ ನಂತರ ಮಗಳೊಂದಿಗೆ ತವರಿನವರು ಕಳೆದುಕೊಳ್ಳುವ ಅಧಿಕಾರ, ಸೊಸೆಯನ್ನು ಹೇಗಾದರೂ ಬಳಸಬಹುದೆಂಬ ಗಂಡನ ಮನೆಯ ಅಧಿಕಾರ ಅವಳು ಬಲಿಗಾಗಿ ಬೆಳೆಸಿದ ಬಲಿಪಶು ಎಂಬುದನ್ನು ಹೇಳುತ್ತದೆ ಈ ಕಥನಕಾವ್ಯ. ಗಂಡನ ಅನುಪಸ್ಥಿತಿಯಲ್ಲಿ ತೆಗೆದುಕೊಳ್ಳುವ ತೀರ್ಮಾನ, 'ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕು' ಎನ್ನುವ ಸಮಾಜದ ನಿರೀಕ್ಷೆಗಳು ಹೆಣ್ಣು ಎಲ್ಲಿದ್ದರೂ ಅಸಹಾಯಕಳೇ ಎಂಬ ಮಾತನ್ನು ಪುಷ್ಟೀಕರಿಸುತ್ತದೆ. ನಮ್ಮ ಗತ ಚರಿತ್ರೆಯಲ್ಲಿ ಉಳಿದುಹೋದ ಒಂದು ಮೂಕ ರೋದನದ ಕಥನವಾಗಿಯೇ ಈ ಕಥಾನಕ ಮತ್ತೆ ಮತ್ತೆ ಓದಿಸಿಕೊಳ್ಳುತ್ತದೆ. 'ಗೋವಿನಹಾಡು' ಕೊಟ್ಟ ಮಾತಿಗೆ ತಪ್ಪದ ಪುಣ್ಯಕೋಟಿಯ ಕತೆಯಾದರೆ, 'ಕೆರೆಗೆಹಾರ' ಸಮಾಜದಲ್ಲಿ ಜೀವದ ಬೆಲೆಯಿಲ್ಲದ ಮರೆಯಾಗುವ ಹೆಣ್ಣೊಬ್ಬಳ ಕತೆಯಾಗಿದೆ.

■ **ಅಮೃತಮತಿ**

## ಮಾತೇ ಮುತ್ತು

- ನಮ್ಮ ಹೃದಯ ಮತ್ತು ಮನಸ್ಸುಗಳ ನಡುವಣ ಸೇತುವೆಯ ಕೆಳಗೆ ಹುದುಗಿರುವ ವಿಕಾರ ಪ್ರಾಣಿಯೇ ನಮ್ಮ ಅಹಂ.
  —ಡೆನಿಸ್ ಮಿಲರ್
- ಸೇವೆಯೇ ಮಾನವನ ಆದರ್ಶದ ಒರೆಗಲ್ಲು.
  —ಅನಿಬೆಸೆಂಟ್
- ಆತ್ಮದ ರಕ್ಷಣೆಗೆ ಮತ್ತು ಕೀರ್ತಿಯ ರಕ್ಷಣೆಗೆ ಅಹಿಂಸೆ ಅವಶ್ಯಕ. ಹಿಂಸ್ರಕನ ಲಾಂಛನ ಈಟಿ ಅಥವಾ ಖಡ್ಗ ಅಥವಾ ಬಂದೂಕು. ದೇವರು ಅಹಿಂಸಕನ ಗುರಾಣಿ.
  —ಮಹಾತ್ಮ ಗಾಂಧಿ
- ಮಾನವನ ಜೀವನದ ಸಕಲ ವ್ಯಾಪಾರಗಳಿಗೆ ಹೋರಾಟ ಬಡಿದಾಟಗಳಿಗೆ ಅನ್ನದ ಸಮಸ್ಯೆಯೇ ಮೂಲ ಕಾರಣ.
  —ಜಾಕೋಬ್ ರೋಪಿನ್
- ಆತ್ಮವಿಶ್ವಾಸ ಅಹಂಕಾರವಲ್ಲ.
  —ಎಸ್.ವಿ. ರಂಗಣ್ಣ